ಮೂಲ ದಾವಾ ಸಂಖ್ಯೆ. 7/2020 ಪಿ ಡಬ್ಲ್ಯೂ 1

(ದಿನಾಂಕ 23-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟಿ ಸವಾಲು ಃ ಪ್ರತಿವಾದಿಯರ ಪರ ಶ್ರೀಮತಿ ಎಸ್ ಹೆಚ್ ವಿ . ವಕೀಲರಿಂದಃ-

ವೆಂಕಮ್ಮ ನನಗೆ ತಾಯಿ ಆಗಬೇಕು. ನನ್ನ ತಾಯಿಯವರು ಪ್ರತಿವಾದಿಯರ ಬಳಿ ಠೇವಣಿ ಹಣವನ್ನು ಇಟ್ಟಿದ್ದು ಆ ಬಗ್ಗೆ ನಾನು ಈ ದಾವೆಯನ್ನು ದಾಖಲಿಸಿದ್ದೇನೆ. ದಿನಾಂಕ 11.12.2008 ರಂದು ನನ್ನ ತಾಯಿ ಪ್ರತಿವಾದಿಯರ ಬಳಿ 2 ಲಕ್ಷ ಹಣವನ್ನು ಠೇವಣಿ ಇಟ್ಟಿದ್ದರು. ನನ್ನ ತಾಯಿ ಶಿಕ್ಷಕಿ ಯಾಗಿದ್ದು ಅವರು ಸೇವೆಯಿಂದ ನಿವೃತ್ತಿಯಾದ ನಂತರ 2 ಲಕ್ಷ ರೂಪಾಯಿಗಳನ್ನು ಠೇವಣಿ ಇಟ್ಟಿದ್ದರು. ಅವರು ಸನ್ 2008 ರಲ್ಲಿ ಸೇವೆ ಯಿಂದ ನಿವೃತ್ತಿ ಹೊಂದಿದರು. ಅವರು 5 ವರ್ಷದ ಅವದಿಯವರೆಗೆ ಹಣವನ್ನು ಠೇವಣಿ ಮಾಡಿದ್ದರು. ಠೇವಣಿ ಮಾಡಿದ ಬಗ್ಗೆ ದಾಖಲಿಗಳನ್ನು ನಾನು ನಮ್ಮ ವಕೀಲರ ಬಳಿ ನೀಡಿದ್ದೇನೆ. ಸದರಿ ದಾಖಲೆಗಳ ಬಗ್ಗೆ ನಾನು ಎಲ್ಲಾ ವಿಚಾರವನ್ನು ಕೇಳಿ ತಿಳಿದುಕೊಂಡಿದ್ದೇನೆ. ಸದರಿ ಠೇವಣಿ ಹಣ ಅವಧಿ ಪೂರ್ಣ ಗೊಂಡಿದ ನಂತರ ನನ್ನ ತಾಯಿಯವರು ಅನೇಕ ಸಾರಿ ಪ್ರತಿವಾದಿಯರ ಬಳಿ ಹೋಗಿ ಹಣವನ್ನು ಕೇಳಿರುತ್ತಾರೆ. ಅವರು ಬಹಳ ಸರಿ ಬ್ಯಾಂಕಿಗೆ ಹೋಗಿದ್ದರು ಯಾವ ಯಾವ ದಿನಾಂಕ ದಂದು ಹೋಗಿದ್ದರು ಎಂದು ನನಗೆ ಹೇಳಲು ಆಗುವುದಿಲ್ಲ. ಅವರು ಹಗರಿಬೊಮ್ಮನಹಳ್ಳಿ ತಾಲೂಕಿನ ಬಸರಕೋಡಿನಲ್ಲಿ ಕೆಲಸ ಮಾಡುತ್ತಿದ್ದರು. ದಿನಾಂಕ 28.04.2011 ರಂದು ಸದರಿ ಠೇವಣಿ ಹಣ ಪೈಕಿ 2 ಲಕ್ಷ ರೂಪಾಯಿಗಳನ್ನು ಚೆಕ ನಂ 189668 ರಂತೆ ನನ್ನ ತಾಯಿಯವರಿಗೆ ನೀಡಿರುತ್ತಾರೆಂದರೆ ಸುಳ್ಳು. ಸಾಕ್ಷಿಯು ಮುಂದುವರೆದು ಬರಿ 20,000 ಜಮಾ ಆಗಿದೆ ಎಂದು ಹೇಳಿರುತ್ತಾರೆ. ದಿ 16.08.2011 ರಂದು ಚೆಕ್ ನಂ 206142 ಹಾಗೂ ದಿ 29.08.2016 ರಂದು ಚೆಕ ನಂ 017816 ನೇದ್ದರುಗಳ ಮೂಲಕ ಪುನಃ 55,000 ಗಳನ್ನು ನಮ್ಮ ತಾಯಿಯವರು ಪ್ರತಿವಾದಿಯರಿಂದ ಪಡೆದಿರುತ್ತಾರೆ ಎಂದರೆ ಸುಳ್ಳು .ನಂತರ 25000 ಗಳು ಪ್ರತಿವಾದಿಯರಿಂದ ನಮ್ಮ ತಾಯಿಯವರ ಖಾತೆಗೆ ಜಮಾ ಆಗಿರುತ್ತದೆ ಎಂದರೆ ಸರಿಯಲ್ಲ. ನಮ್ಮ ತಾಯಿಯವರು ಒಟ್ಟು 280,000 ರೂ ಗಳನ್ನು ಪ್ರತಿವಾದಿಯರಿಂದ ಪಡೆದಿದ್ದು ಪ್ರತಿವಾದಿಯರು ನಮ್ಮ ತಾಯಿಯವರಿಗೆ ಯಾವುದೇ ಹಣವನ್ನು ಮರು ಪಾವತಿ ಮಾಡಲು ಬಾಧ್ಯಸ್ಥರು ಇರುವುದಿಲ್ಲ ಎಂದರೆ ಸರಿಯಲ್ಲ. ದಿನಾಂಕ 19.03.2019 ರಂದು ನನ್ನ ತಾಯಿಯವರು ಪ್ರತಿವಾದಿಯರು ಠೇವಣಿ ಹಣ ಮರುಪಾವತಿ ಮಾಡಿ ಅಂತಾ ನೋಟೀಸು ನೀಡಿದರು ಎಂದರೆ ಸರಿ. ಸದರಿ ನೋಟೀಸಿನಲ್ಲಿ 40000 ನಮ್ಮ ತಾಯಿಯವರ ಅಕೌಂಟನಲ್ಲಿ ಜಮಾ ಆಗಿತ್ತು ಅಂತಾ ಹೇಳಿ ಬರೆಸಿರುತ್ತಾರೆ. ಆ ನೋಟೀಸಿನಲ್ಲಿ ನಮ್ಮ ತಾಯಿಯವರು ಆ ರೀತಿ

ಯಾವುದೇ ವಿಚಾರವನ್ನು ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. ನಂತರ ಪ್ರತಿವಾದಿಯರು ಸದರಿ ನೋಟೀಸಿಗೆ ತಮ್ಮ ವಕೀಲರ ಮೂಲಕ ಪ್ರತ್ಯುತ್ತರ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ರತ್ಯುತ್ತರ ಕೊಟ್ಟಿರುವ ಬಗ್ಗೆ ಮತ್ತು ಪ್ರತಿವಾದಿಯರು ನೀಡಿರುವಂತಹ ಮೊತ್ತದ ಬಗ್ಗೆ ನಮ್ಮ ವಾದ ಪತ್ರದಲ್ಲಿ ಬರೆಸಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯವರು ನಮ್ಮ ತಾಯಿಯವರಿಗೆ ಸಂಪೂರ್ಣ ಹಣವನ್ನು ಪಾವತಿ ಮಾಡಿದ್ದರಿಂದ ನಾನು ಹೇಳುವ ದಾವಾ ಮೊತ್ತವನ್ನು ಪ್ರತಿವಾದಿಯರು ನಮಗೆ ಕೊಡಲು ಬಾದ್ಯಸ್ಥರು ಎಂದರೆ ಸರಿಯಲ್ಲ. ಅದೇ ರೀತಿ ಸದರಿ ಮೊತ್ತದ ಮೇಲೆ ಕೇಳಿರುವಂತಹ ಬಡ್ಡಿಯನ್ನು ಕೊಡಲು ಅವರು ಬಾದ್ಯಸ್ಥರು ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ತಾಯಿಯವರು ತನಗೆ ಬರತಕ್ಕ ಹಣವನ್ನು ಅವರು ಪಡೆದುಕೊಂಡಿದ್ದು ಆದರೂ ಸಹ ದಾವೆ ದಾಖಲಿಸುವ ಪೂರ್ವದಲ್ಲಿ ಪ್ರತಿವಾದಿಯರಿಗೆ ಸುಳ್ಳು ನೋಟೀಸನ್ನು ನೀಡಿ ಸುಳ್ಳು ದಾವೆಯನ್ನು ದಾಖಲಿಸಿ ಸುಳ್ಳು ಸಾಕ್ಷಿ ಪ್ರಮಾಣ ಪತ್ರವನ್ನು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಯನ್ನು ಸೂಕ್ತ ಪ್ರಾಧಿಕಾರದ ಮುಂದೆ ದಾಖಲಿಸಬೇಕಾಗಿತ್ತು. ಈ ದಾವೆಯ ವಿಚಾರಣೆ ಮಾಡಲು ಈ ಮಾನ್ಯ ನ್ಯಾಯಾಲಯಕ್ಕೆ ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ದಾಖಲಿಸುವ ಪೂರ್ವದಲ್ಲಿ 1 ಮತ್ತು 2 ನೇ ಪ್ರತಿವಾದಿರ ಮೇಲಾಧಿಕಾರಿಗಳಾದ ಸಹಾಯಕ ಉಪ ನಿಬಂದಕರಿಗೆ ನೋಟೀಸೇನಾದರು ಕೊಟ್ಟೀದ್ದೀರಾ ಎಂದರೆ ಇಲ್ಲ. ಸದರಿಯವರಿಗೆ ನೋಟೀಸು ಕೊಡದೇ ಹೊರತು ಪ್ರತಿವಾದಿಯರ ವಿರುದ್ಧ ಈ ದಾವೆಯನ್ನು ದಾಖಲಿಸಲು ನಮಗೆ ಯಾವುದೇ ಕಾರಣ ಉಂಟಾಗಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ತಾಯಿಯವರಿಗೆ ಮರು ಪಾವತಿ ಮಾಡಬೇಕಾದ ಸಂಪೂರ್ಣ ಹಣವನ್ನು ಪ್ರತಿವಾದಿಯರು ಮರು ಪಾವತಿ ಮಾಡಿರುವುದರಿಂದ ನಾವು ದಾವೆಯಲ್ಲಿ ಕೇಳಿರುವಂತಹ ದಾವಾ ಮೊತ್ತ ಮತ್ತು ಅದರ ಮೇಲೆ ಬಡ್ಡಿ ಹಣವನ್ನು ಪಡೆಯಲು ಅರ್ಹರಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ